# ಧರಂ ಪುಸ್ತಕ ಪ್ರೀತಿ

ಜಗತ್ತಿನ 'ಹಿರಿಯಣ್ಣ'ನೆಂದೇ ಹೆಸರಾದ ಅಮೆರಿಕಕ್ಕೆ ಪ್ರವಾಸ ಹೋಗಲು, ಉದ್ಯೋಗ ಹಿಡಿಯಲು, ಖಾಯಂ ಆಗಿ ನೆಲೆ ನಿಲ್ಲಲು ಭಾರತೀಯರೂ ಸೇರಿದಂತೆ ಪ್ರಪಂಚದ ಎಲ್ಲ ರಾಷ್ಟ್ರಗಳ ಜನರು ಹಾತೊರೆಯುತ್ತಾರೆ. ಅಲ್ಲಿ ಅವಕಾಶ ಹೆಚ್ಚು, ಔದ್ಯೋಗಿಕ ವಾತಾವರಣ ಚೆನ್ನಾಗಿದೆ, ಪ್ರವಾಸ ಹೋದಾಗ ನೋಡಲು ಆಕರ್ಷಕ ತಾಣಗಳಿವೆ ಎಂಬ ಭಾವನೆ ಜನರಲ್ಲಿರುವ ಕಾರಣ 'ಅಮೆರಿಕ ಎಂದರೆ ಸ್ವರ್ಗ' ಎಂದೇ ಭಾವಿಸುವವರು ಹೆಚ್ಚು. ಇಂಥ ಮುಂದುವರಿದ ದೇಶದಿಂದಲೂ ಭಾರತಕ್ಕೆ, ಅದರಲ್ಲೂ ಬೆಂಗಳೂರಿಗೆ ಬಂದು ಇಲ್ಲಿ ಉದ್ಯೋಗ ಆರಂಭಿಸಿದವರಿದ್ದಾರೆ ಎಂದರೆ ಅದು ಅಚ್ಚರಿಯ ವಿಚಾರವೇ.

ಅಮೆರಿಕದ ರಾಜಧಾನಿ ವಾಷಿಂಗ್ಟನ್ ನಿಂದ ಬೆಂಗಳೂರಿಗೆ ಬಂದವರು ಧರಂ ಖಾಲ್ಸ ಅವರು. ವಾಷಿಂಗ್ಟನ್ ಡಿ ಸಿ ಯಿಂದ 2011ರಲ್ಲಿ ಬೆಂಗಳೂರಿಗೆ ಬಂದ ಇವರು ಇಲ್ಲಿ ತಮ್ಮ ಬ್ಯುಸಿನೆಸ್ ಪಾರ್ಟ್ನರ್ ಜತೆ ಸೇರಿ 'ಕ್ಯಾಲಿಫೋರ್ನಿಯ ಬುರಿಟೊ' ಫಾಸ್ಟ್‌ಫುಡ್ ರೆಸ್ಟೊರೆಂಟ್ ಆರಂಭಿಸಿದರು. ಭಾರತ, ಕರ್ನಾಟಕಗಳ ಮಹಾ ನಗರಗಳಲ್ಲಿ ಫಾಸ್ಟ್‌ಫುಡ್‌ಗೆ ಭಾರೀ ಬೇಡಿಕೆ ಇರುವುದರಿಂದ ಹೋಟೆಲ್ ಉದ್ಯಮ ಚೆನ್ನಾಗಿ ನಡೆಯುತ್ತಿದೆ ಎಂಬುದು ಇವರ ಅಭಿಪ್ರಾಯ.

'ಇಲ್ಲಿನ ಜನರಿಗೆ ನನ್ನ ಹೆಸರಿನ ಬಗ್ಗೆ ತುಂಬ ಕುತೂಹಲ. ಅನೇಕ ಮಂದಿ ನನ್ನ ಹೆಸರಿನ ಅರ್ಥವನ್ನು ಕೇಳುತ್ತಾರೆ. ಧರಂ ಎಂದು ಹೇಗೆ ಬಂತು ಎಂದು ಅಚ್ಚರಿ ವ್ಯಕ್ತಪಡಿಸುತ್ತಾರೆ. ನನ್ನ ಹೆತ್ತವರಾದ ಸ್ಟೀವ್ ಮತ್ತು ಜೋನ್ಸ್ ನನಗೆ ಈ ಹೆಸರು ಇಟ್ಟಿದ್ದಾರೆ. ಇದು 'ಅಮೆರಿಕನ್ ಸೌಂಡಿಂಗ್ ನೇಮ್' ಅಲ್ಲ ಎಂಬುದು ಇಲ್ಲಿನ ಜನರ ಪ್ರತಿಪಾದನೆ. ಆದರೆ ನನಗೆ ನನ್ನ ಹೆಸರಿನ ಬಗ್ಗೆ ತುಂಬ ಪ್ರೀತಿ ಇದೆ' ಎನ್ನುತ್ತಾರೆ ಧರಂ.

ಧರಂಗೆ ಕಾಲೇಜು ದಿನಗಳಿಂದಲೂ ಫಾಸ್ಟ್‌ಫುಡ್ ನಡೆಸುವ ಬಗ್ಗೆ ವಿಪರೀತ ಆಸಕ್ತಿ ಅಂತೆ. 'ಇಲ್ಲಿ ಫಾಸ್ಟ್‌ಫುಡ್ ತಿನ್ನುವ ಜನ ಜಾಸ್ತಿ. ಆನ್‌ಲೈನ್‌ನಲ್ಲೂ ಫಾಸ್ಟ್‌ಫುಡ್ ಅನ್ನು ಪೂರೈಸುತ್ತೇವೆ' ಎನ್ನುತ್ತಾರೆ.

'ಭಾರತೀಯ ಇತಿಹಾಸ ಬಗ್ಗೆ ಅಪಾರ ಕುತೂಹಲ. ಮೊಘಲ್ ಸಾಮ್ರಾಜ್ಯದ ಬಗ್ಗೆ, ಆಧುನಿಕ ಭಾರತದ ಬಗ್ಗೆ, ಸಿಖ್ ಧರ್ಮದ ಬಗ್ಗೆ ತಿಳಿಯಬೇಕು, ಇವೆಲ್ಲ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಬೇಕು ಎನ್ನುವ ಆಸಕ್ತಿ ಇದೆ. ಹೀಗಾಗಿ ಇದೇ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಲೈಬ್ರರಿಯಿಂದ ತಂದು ಓದುತ್ತಿರುತ್ತೇನೆ. ಬಿಡುವಿನ ವೇಳೆಯನ್ನು ಪುಸ್ತಕಗಳಿಗಾಗಿಯೇ ಮೀಸಲಿಟ್ಟಿದ್ದೇನೆ' ಎಂದು ಹೇಳುತ್ತಾರೆ ಈ ಅಮೆರಿಕ ಮೂಲದ ಉದ್ಯಮಿ.

ಹಾಗೆಂದು ಧರಂ ವಾಷಿಂಗ್ಟನ್‌ನಿಂದ ಸೀದಾ ಬೆಂಗಳೂರಿಗೆ ಬಂದು ಹೋಟೆಲ್ ಉದ್ಯಮ ಆರಂಭಿಸಿದವರಲ್ಲ. ಇಲ್ಲಿಗೆ ಬರುವ ಮುನ್ನ ದೆಹಲಿಯಲ್ಲಿ ಹಲವು ವರ್ಷ ಇದ್ದು ರೆಸ್ಟೊರೆಂಟ್‌ಗಳನ್ನು ನಡೆಸಿದವರು. ದೆಹಲಿಯಲ್ಲಿ ವಿಪರೀತ ಸೆಕೆ ಜತೆಗೆ ಧೂಳು, ಕಲುಷಿತ ವಾತಾವರಣದಿಂದಾಗಿ ಆ ಮಹಾ ನಗರವನ್ನು ತೊರೆದರು. ಸ್ನೇಹಿತರ ಸಲಹೆ ಮೇರೆಗೆ ಬೆಂಗಳೂರಿಗೆ ಬಂದರು. ಇಲ್ಲಿನ ವಾತಾವರಣ, ಉದ್ಯಮಕ್ಕೆ ಇರುವ ವಿಪುಲ ಅವಕಾಶ ಜತೆಗೆ ಜನರ ಸ್ನೇಹಮಯ ಆದರಾತಿಥ್ಯ ಕಂಡು ಬೆಂಗಳೂರಿನಲ್ಲೇ ಖಾಯಂ ಆಗಿ ನೆಲೆ ನಿಲ್ಲುವ ನಿರ್ಧಾರ ಮಾಡಿದರು. ಬೆಂಗಳೂರಿನ ಇಂದಿರಾ ನಗರದಲ್ಲಿ 'ಕ್ಯಾಲಿಫೋರ್ನಿಯ ಬುರಿಟೊ' ಹೆಸರಿನ ರೆಸ್ಟೊರೆಂಟ್ ತುಂಬ ಚೆನ್ನಾಗಿ ನಡೆಯುತ್ತಿದೆಯಂತೆ. ತಮ್ಮ ಸ್ನೇಹಿತರ ಜತೆಗೂಡಿ ಮಾಡಿದ ಈ ಹೋಟೆಲ್ ಆರಂಭದಿಂದಲೂ ಲಾಭದಲ್ಲೇ ನಡೆಯುತ್ತಿದೆಯಂತೆ.

ಇಲ್ಲಿನ ಜನರಿಗೆ ಹಸಿವು ಜಾಸ್ತಿ. ಶ್ರಮಜೀವಿಗಳು. ಇಡೀ ದಿನ ಕಷ್ಟಪಟ್ಟು ದುಡಿಯುತ್ತಾರೆ. ಯಾವುದೇ ಮೋಸ ವಂಚನೆಯಿಲ್ಲದೆ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸುತ್ತಾರೆ. ಊಟ, ತಿಂಡಿಯನ್ನೂ ಹೊಟ್ಟೆತುಂಬ ಮಾಡಿ ಪ್ರಾಮಾಣಿಕವಾಗಿ ಹಣ ತೆತ್ತು ಹೋಗುತ್ತಾರೆ. ಹೀಗಾಗಿ ಕೆಲಸ ಅತ್ಯಂತ ಸುಗಮವಾಗಿ ಸಾಗುತ್ತಿದೆ ಎಂದು ತಿಳಿಸುತ್ತಾರೆ ಧರಂ.

ಪ್ರವಾಸ ಹೋಗುವುದು ಧರಂ ನ ಪ್ರಿಯವಾದ ಹವ್ಯಾಸ. ಚೆನ್ನೈ, ಮುಂಬಯಿ, ದೆಹಲಿಯ ಹಲವು ಭಾಗಗಳು, ಹೈದರಾಬಾದ್, ಉದಯಪುರ, ಜೈಪುರಗಳನ್ನು ನೋಡಿ ಬಂದಿದ್ದಾರೆ. ಎಲ್ಲ ಪ್ರವಾಸಿ ತಾಣಗಳು ಸುಂದರವಾಗಿವೆ. ಕುಟುಂಬ ಸದಸ್ಯರ ಜತೆಗೆ ಹೋಗಿ ಬರಲು ಅತ್ಯಂತ ಸೂಕ್ತವಾದ ತಾಣಗಳಿವು ಎಂಬುದು ಇವರ ಅಭಿಪ್ರಾಯ.



ವಾಷಿಂಗ್ಟನ್‌ನಿಂದ ಬಂದ ಧರಂ ಖಾಲ್ಸ ಚಿತ್ರ: ಎಸ್.ಕೆ. ದಿನೇಶ್

'ಅಮೆರಿಕದಲ್ಲಿರುವಾಗ ಇವರ ಕುಟುಂಬ ಪ್ರತೀ ವರ್ಷವೂ ಒಂದೊಂದು ಊರುಗಳಿಗೆ ಪ್ರವಾಸ ಹೋಗಿ ಬರುತ್ತಿತ್ತಂತೆ. ಕಳೆದ ವರ್ಷ ಜಪಾನ್, ಈ ವರ್ಷ ದುಬೈ ಹೋಗುವ ಯೋಜನೆ ಇದೆ. ಮುಂದಿನ ವರ್ಷ ಹಾಂಕಾಂಗ್, ಶ್ರೀಲಂಕಾ.. ಹೀಗೆ ಪ್ರವಾಸದ ಯೋಜನೆ ಹಾಕಿಕೊಂಡು ಅದರಂತೆ ಹೋಗಿ ಬರುತ್ತೇವೆ' ಎನ್ನುತ್ತಾರೆ ಧರಂ.

ಕ್ರೀಡೆಯಲ್ಲಿ ಧರಂಗೆ ಬಹಳ ಆಸಕ್ತಿ. ಬಾಸ್ಕೆಟ್‌ಬಾಲ್, ಬೇಸ್‌ಬಾಲ್, ಫುಟ್ಬಾಲ್ ಎಲ್ಲವನ್ನೂ ಆಡಲು ಇಷ್ಟವಂತೆ. ವಾರಾಂತ್ಯದಲ್ಲಿ ಅಥವಾ ಬಿಡುವಿನ ವೇಳೆಯಲ್ಲಿ ಇಲ್ಲಿನ ಸ್ನೇಹಿತರ ಜತೆಗೆ ಯಾವುದಾದರೊಂದು ಕ್ರೀಡೆ ಆಡುತ್ತಾರಂತೆ.

ಇಲ್ಲಿ ನಗರವಂತೂ ಸದಾ ಸಂಚಾರದಟ್ಟಣೆ, ಜನದಟ್ಟಣೆಯಿಂದಲೇ ಕೂಡಿರುತ್ತದೆ. ನಗರದೊಳಗೆ ಓಡಾಡಲು ಕಷ್ಟ. ಆದರೆ ಮೆಟ್ರೊ, ಒಲಾ, ಉಬರ್‌ಗಳಂಥ ಸೌಲಭ್ಯ ಇರುವ ಕಾರಣ ಸಮಸ್ಯೆ ಅಷ್ಟಾಗಿ ಕಾಣುತ್ತಿಲ್ಲ ಎನ್ನುವುದು ಇವರ ಅಭಿಪ್ರಾಯ.

★ ಅವನೀಶ್